## ಅಮೆರಿಕದಲ್ಲಿ ಆತಂಕ

ಅಮೆರಿಕ ಥೈರಾಯ್ಡ್ ಅಸೋಸಿಯೇಷನ್ (ಎಟಿಎ) ನಡೆಸಿದ ಸಮೀಕ್ಷೆ ಪ್ರಕಾರ ಅಮೆರಿಕದಲ್ಲಿ ಸುಮಾರು 20 ದಶಲಕ್ಷ ಮಂದಿ ಥೈರಾಯ್ಡ್ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಶೇ. 60ರಷ್ಟು ಮಂದಿಗೆ ತಮಗೆ ಈ ಸಮಸ್ಯೆ ಇದೆ ಎಂಬ ಬಗ್ಗೆ ಅರಿವೇ ಇಲ್ಲ. ಪುರುಷರಿಗಿಂತ ಏಳೆಂಟು ಪಟ್ಟು ಹೆಚ್ಚು ಮಹಿಳೆಯರು ಥೈರಾಯ್ಡ್‌ನಿಂದ ಬಳಲುತ್ತಿರುವುದು ಪತ್ತೆಯಾಗಿದ್ದು ಆತಂಕ ಮೂಡಿಸಿದೆ. ಜೀವಿತಾವಧಿಯಲ್ಲಿ ಪ್ರತಿ ಎಂಟು ಮಹಿಳೆಯರಲ್ಲಿ ಒಬ್ಬರಿಗೆ ಈ ಸಮಸ್ಯೆಇದೆ. ಹೆಚ್ಚಿನವರಿಗೆ ಥೈರಾಯ್ಡ್‌ಗೆ ಕಾರಣ ಏನು ಎಂಬುದೇ ತಿಳಿದಿರಲ್ಲ. ಥೈರಾಯ್ಡ್ ಸಮಸ್ಯೆ ಇರುವುದು ಮತ್ತು ಇದಕ್ಕೆ ಕಾರಣ ಪತ್ತೆಯಾಗದೆ ಇರುವ ಕಾರಣ ಮಹಿಳೆಯರಲ್ಲಿ ಹೃದ್ರೋಗ ಸಮಸ್ಯೆ, ಮಂಡಿನೋವು ಹಾಗೂ ಫಲವತ್ತತೆ ಸಮಸ್ಯೆಗಳು ಎದುರಾಗುತ್ತವೆ. ವಿವಾಹಿತ ಮಹಿಳೆಯರಲ್ಲಿ ಹೈಪೋಥೈರಾಯ್ಡಿಸಮ್ ಇದ್ದರೆ ಗರ್ಭಪಾತ, ಅವಧಿಪೂರ್ವ ಹೆರಿಗೆ, ಹಾಗೂ ಇಂಥ ಮಕ್ಕಳಲ್ಲಿ ಬೆಳವಣಿಗೆ ಸಮಸ್ಯೆ ಅಧಿಕವಾಗಿರುತ್ತದೆ. ಥೈರಾಯ್ಡ್ ಸಮಸ್ಯೆಗಳಲ್ಲಿ ಬಹುತೇಕ ಜೀವನಪರ್ಯಂತ ಔಷಧಿ ತೆಗೆದುಕೊಳ್ಳುವಂಥದ್ದೇ ಆಗಿದೆ.

ಕಡಿಮೆಯಾಗುವುದು, ಕೈಕಾಲು ನಡುಗುವುದು, ಭೇದಿ ಮುಂತಾದವು ಹೈಪರ್‌ಥೈರಾಯ್ಡಿಸಮ್ ಲಕ್ಷಣಗಳು.

ಗಾಯಿಟರ್ ಸಾಮಾನ್ಯವಾಗಿ ಅಯೊಡಿನ್ ಕೊರತೆಯಿಂದ ಬರುವ ಕಾಯಿಲೆ. ಇದರಿಂದ ಗಂಟಲಿನ ಭಾಗದಲ್ಲಿ ಊತ ಕಾಣಿಸಿಕೊಳ್ಳುತ್ತದೆ. ಇಲ್ಲಿ ಗಡ್ಡೆಗಳು ಇದ್ದರೆ ಹಾಗೂ ಕ್ಯಾನ್ಸರ್‌ಕಾರಕ ಲಕ್ಷಣಗಳಿದ್ದರೂ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಲೇಬೇಕು. ಬಹಳ ಹಿಂದೆ ಥೈರಾಯ್ಡ್ ಸಮಸ್ಯೆ ಅಯೊಡಿನ್ ಕೊರತೆಯಿಂದ ಬರುತ್ತಿತ್ತು. ಆದರೆ ಈಗ ಕರಾವಳಿ ಮಲೆನಾಡು ಸೇರಿದಂತೆ ದೇಶದ ಬಹುತೇಕ ಕಡೆಗಳಲ್ಲಿ ಅಯೊಡಿನ್ ಕೊರತೆಯಿಂದ ಥೈರಾಯ್ಡ್ ಬರುವುದೇ ಇಲ್ಲ. ಕೇವಲ ಹಿಮಾಲಯ ಭಾಗಗಳಲ್ಲಿ ಮಾತ್ರ ಅಯೊಡಿನ್ ಕೊರತೆಯ ಥೈರಾಯ್ಡ್ ಬರುತ್ತಿದೆ.

### ಥೈರಾಯ್ಡ್ ತೊಂದರೆ ಲಕ್ಷಣಗಳೇನು?

- ಹಾರ್ಮೋನಿನ ಉತ್ಪಾದನೆಯಲ್ಲಿ ಏರುಪೇರು
- ಹೈಪೊಥೈರಾಯ್ಡಿಸಮ್‌ನಲ್ಲಿ ತೂಕ ಹೆಚ್ಚುವುದು
- ಕೂದಲು ಉದುರುವುದು
- ಗಂಟಲಿನ ಭಾಗದಲ್ಲಿ ಊತ
- ಮಹಿಳೆಯರಲ್ಲಿ ಫಲವಂತಿಕೆ ಸಮಸ್ಯೆ ಹಾಗೂ ಇದರಿಂದ ಮಕ್ಕಳಾಗದೇ ಇರಬಹುದು.
- ಹಸಿವೆ ಕಡಿಮೆಯಾಗುವುದು
- ಮಾನಸಿಕ ಖಿನ್ನತೆ
- ಕೀಳರಿಮೆ ಉಂಟಾಗುವುದು




### ಪತ್ತೆ ಹೇಗೆ?

ಥೈರಾಯ್ಡ್ ಸಮಸ್ಯೆಯನ್ನು ಈಗ ಬಹಳ ಸುಲಭವಾಗಿ ಪತ್ತೆ ಹಚ್ಚಬಹುದು. ಥೈರಾಯ್ಡ್ ಹಾರ್ಮೋನ್ ಪರೀಕ್ಷೆ, ಗ್ರಂಥಿಯನ್ನು ಸ್ಕ್ಯಾನಿಂಗ್ ಮಾಡಿ ನೋಡಬಹುದು, ಇದರಿಂದ ಹೈಪರ್‌ಥೈರಾಯ್ಡಿಸಮ್ ಅಥವಾ ಹೈಪೊಥೈರಾಯ್ಡಿಸಮ್ ಬಂದಿದೆಯೇ ಎಂಬುದನ್ನು ಕಂಡುಹಿಡಿಯಬಹುದು, ಮಧುಮೇಹ, ಏರುರಕ್ತದೊತ್ತಡಗಳಂತಹ ಸಮಸ್ಯೆ ಇದ್ದವರು ನಿಯಮಿತ ತಪಾಸಣೆಗೆಂದು ಹೋದಾಗ ಥೈರಾಯ್ಡ್ ಪರೀಕ್ಷೆ ಮಾಡಿಸಿಕೊಂಡಾಗ ಪತ್ತೆಯಾಗುತ್ತದೆ.

'ಥೈರಾಯ್ಡ್ ಬಗ್ಗೆ ಜನರಲ್ಲಿ ಈಗೀಗ ಅರಿವು, ಜಾಗೃತಿ ಹೆಚ್ಚುತ್ತಿದೆ. ಅಲ್ಲದೆ ಇದಕ್ಕೆ ಉತ್ತಮ ಔಷಧಿಗಳೂ ಇವೆ. ಇದರ ಪತ್ತೆಗಾಗಿ ಮಾಡಲಾಗುವ ಪರೀಕ್ಷೆಗಳೂ ಈಗ ಎಲ್ಲ ಕಡೆಗಳಲ್ಲಿ ಸುಲಭವಾಗಿ ಸಿಗುತ್ತಿದೆ. ಹಿಂದೆಲ್ಲ ಥೈರಾಯ್ಡ್ ಪರೀಕ್ಷೆಯ ಲ್ಯಾಬ್ ವರದಿಗಾಗಿ ಹಲವು ದಿನಗಳ ಕಾಲ ಕಾಯಬೇಕಿತ್ತು. ಆದರೆ ಈಗ ಬೇಗನೆ ಸಿಗುತ್ತದೆ. ತಾಲ್ಲೂಕು ಆಸ್ಪತ್ರೆಗಳಲ್ಲೂ ಥೈರಾಯ್ಡ್ ಪತ್ತೆಗೆ ವ್ಯವಸ್ಥೆ ಇದೆ' ಎಂದು ಹೇಳುತ್ತಾರೆ ಶಿವಮೊಗ್ಗದ ಮ್ಯಾಕ್ಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಎಂಡೊಕ್ರೈನಾಲಜಿಸ್ಟ್ ಆಗಿರುವ ಡಾ. ಪ್ರವೀಣ್ ಕುಮಾರ್ ದೇವರ್ಭಾವಿ.

## ಭಾರತದಲ್ಲಿ 42 ಲಕ್ಷಕ್ಕೂ ಹೆಚ್ಚು ಮಂದಿಗೆ ಥೈರಾಯ್ಡ್

ಥೈರಾಯ್ಡ್ ಒಂದು ಸರ್ವೇಸಾಮಾನ್ಯವಾದ ಸಮಸ್ಯೆಯಾಗಿದ್ದು, ಭಾರತದಾದ್ಯಂತ ಬಹಳಷ್ಟು ಮಂದಿ ಇದರಿಂದ ಬಳಲುತ್ತಿದ್ದಾರೆ. ಒಂದು ಸಮೀಕ್ಷೆಯ ಪ್ರಕಾರ ಭಾರತದಲ್ಲಿ ಸುಮಾರು 42 ದಶಲಕ್ಷ ಮಂದಿ ಥೈರಾಯ್ಡ್ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಈ ಸಮೀಕ್ಷೆಯಲ್ಲಿ ಐದು ಆಯಾಮಗಳಲ್ಲಿ ಪತ್ತೆ ಮಾಡಲಾಗಿತ್ತು.



ಡಾ. ಪ್ರವೀಣ್ ದೇವರ್ಭಾವಿ

'ಮಹಿಳೆಯರಲ್ಲಿ ಹಾರ್ಮೋನಿನ ಏರುಪೇರು ಆಗುವುದರಿಂದ ಇವರಲ್ಲಿ ಥೈರಾಯ್ಡ್ ಸಮಸ್ಯೆ ಹೆಚ್ಚು. ಭಾರತದಲ್ಲಿ ಪ್ರತಿ ಹತ್ತು ಮಹಿಳೆಯರಿಗೆ ಥೈರಾಯ್ಡ್ ಸಮಸ್ಯೆ ಇದ್ದರೆ ಒಬ್ಬ ಪುರುಷನಿಗೆ ಮಾತ್ರ ಇರುತ್ತದೆ. ಆದರೆ ಇದು ಸಣ್ಣ, ಮಧ್ಯ ಹಾಗೂ ಹಿರಿಯರು ಎಂಬ ಭೇದವಿಲ್ಲದೆ ಎಲ್ಲರಿಗೂ ಬರುವಂಥ ಕಾಯಿಲೆ. ಒಟ್ಟಾರೆಯಾಗಿ 100 ಜನರಲ್ಲಿ ಶೇ.68ರಷ್ಟು ಮಂದಿಯಲ್ಲಿ ಥೈರಾಯ್ಡ್ ಸಮಸ್ಯೆ ಇರುತ್ತದೆ' ಎನ್ನುತ್ತಾರೆ ಡಾ. ಪ್ರವೀಣ್ ದೇವರ್ಭಾವಿ.

### ಆನುವಂಶಿಕವಾಗಿಯೂ...

'ಆನುವಂಶೀಯತೆಯಿಂದಲೂ ಥೈರಾಯ್ಡ್ ಬರುತ್ತದೆ. ಮಕ್ಕಳಲ್ಲಿ ಸಾಮಾನ್ಯವಾಗಿ ಒಂದರಿಂದ ಐದು ವರ್ಷದೊಳಗಿನ ಮಕ್ಕಳಿಗೆ ಥೈರಾಯ್ಡ್ ಬಂದರೆ ಅದು ಆನುವಂಶಿಕವಾಗಿಯೇ ಎಂದು ತಿಳಿಯಬೇಕು. ನವಜಾತ ಶಿಶುಗಳಲ್ಲಿ ಹುಟ್ಟಿದ ಮೂರು ದಿನಕ್ಕೆ ಥೈರಾಯ್ಡ್ ಪರೀಕ್ಷೆ ಮಾಡಿಸಬೇಕು. ಇಲ್ಲದಿದ್ದರೆ ಮಗು ಮುಂದೆ ಬುದ್ಧಿಮಾಂದ್ಯ ಆಗುವ ಸಾಧ್ಯತೆ ಇದೆ. ನಮ್ಮ ನೆರೆಯ ಗೋವಾದಲ್ಲಿ ಹುಟ್ಟಿದ ಮೂರು ದಿನಕ್ಕೇ ಮಗುವಿಗೆ ಥೈರಾಯ್ಡ್ ಪರೀಕ್ಷೆ ಮಾಡಿಸುವುದು ಕಡ್ಡಾಯ ಎಂಬ ನಿಯಮ ಇದೆ. ಇದನ್ನು ಸಾರ್ವತ್ರೀಕರಣ ಮಾಡಬೇಕು' ಎಂದು ಸಲಹೆ ಮಾಡುತ್ತಾರೆ ಈ ವೈದ್ಯರು.

'ಪ್ರೌಢಾವಸ್ಥೆಗೆ ಬಂದ ಮಕ್ಕಳಲ್ಲಿ ಕೂಡ ಥೈರಾಯ್ಡ್ ಸಮಸ್ಯೆ ಬಂದರೆ ಅದು ಮಕ್ಕಳಲ್ಲಿ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇದೆ ಎನ್ನುವ ಈ ವೈದ್ಯರು, ಮುಂದೆ ಕಲಿಕೆಯಲ್ಲಿ ತೊಂದರೆ, ಶೈಕ್ಷಣಿಕ ಮಟ್ಟದಲ್ಲಿ ಕುಂಠಿತ ಆಗುವ ಸಾಧ್ಯತೆಗಳೂ ಇವೆ' ಎನ್ನುತ್ತಾರೆ.

### ಉತ್ತಮ ಚಿಕಿತ್ಸೆ ಇದೆ...

ಥೈರಾಯ್ಡ್ ಸಮಸ್ಯೆಗೆ ಇದೀಗ ಉತ್ತಮ ಔಷಧಿಗಳು ಲಭ್ಯ. ಹಾರ್ಮೋನಿನಿಂದ ಬರುವ ತೊಂದರೆಗಾಗಿ ಥೈರಾಕ್ಸಿನ್ ಎಂಬ ಗುಳಿಗೆ ಇದೆ. ಹೈಪೊಥೈರಾಯ್ಡಿಸಮ್ ಬಂದಾಗ ಮೂರು ತಿಂಗಳ ಡೊಸೇಜ್ ಔಷಧಿ ನೀಡಲಾಗುತ್ತದೆ. ಆ ಬಳಿಕ ಮತ್ತೊಮ್ಮೆ ಪರೀಕ್ಷೆ ಮಾಡಿ ಫಲಿತಾಂಶ ನೋಡಿಕೊಂಡು ಚಿಕಿತ್ಸೆ ಕೊಡಲಾಗುತ್ತದೆ. ಆದರೆ ಕೆಲವರಿಗೆ ಜೀವನದುದ್ದಕ್ಕೂ ಮಾತ್ರೆ ಸೇವಿಸಬೇಕಾದ ಅನಿವಾರ್ಯತೆಯೂ ಇದೆ.

(ಡಾ. ಪ್ರವೀಣ್ ಸಂಪರ್ಕ: 9986108182)